# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1108
ಸದಸ್ಯರ ಹೆಸರು : ಶ್ರೀ ಕೆ.ಪಿ.ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 21/09/2021
ಉತ್ತರಿಸುವವರು : ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಚಿಕ್ಕಬಾಣಾವರ ಪುರಸಭೆ ವ್ಯಾಪ್ತಿಯಲ್ಲಿನ ಆಸ್ತಿ ತೆರಿಗೆ ನಿಗಧಿಗೆ ಅನುಸರಿಸುತ್ತಿರುವ ಮಾನದಂಡ ಮತ್ತು ನಿಯಮಗಳೇನು; | ಕರ್ನಾಟಕ ಪೌರಸಭೆಗಳ ಅಧಿನಿಯಮ 1964ರ ಕಲಂ 101 ಮತ್ತು 102ರ ತಿದ್ದುಪಡಿಯಂತೆ ಹಾಗೂ ಪೌರಾಡಳಿತ ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ:292724 ಡಿಎಮ್‌ಎ/ಡಿಇವಿ ಟ್ಯಾಕ್ಸ್/3/2020 ದಿನಾಂಕ:19.02.2021ರ ರೀತ್ಯಾ ಚಿಕ್ಕಬಾಣಾವರ ಪುರಸಭೆ ವ್ಯಾಪ್ತಿಯಲ್ಲಿನ ಎಲ್ಲಾ ರೀತಿಯ ಸ್ವತ್ತುಗಳಿಗೆ ಆಸ್ತಿ ತೆರಿಗೆ ನಿಗಧಿಗೆ ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಲಾಗುತ್ತಿದೆ.<br>ಪ್ರಸ್ತುತ ಸಾಲಿನ ಉಪನೋಂದಣಾಧಿಕಾರಿಗಳ ಮಾರುಕಟ್ಟೆ ಮಾರ್ಗಸೂಚಿ ಬೆಲೆಯ ಶೇಕಡಾ 25 ರಷ್ಟನ್ನು ಮಾತ್ರ ಪರಿಗಣಿಸಲಾಗುತ್ತದೆ.<br>ವಾಸದ ಕಟ್ಟಡಗಳ ಮಾರುಕಟ್ಟೆ ಮೂಲ ಬೆಲೆಯ ಕನಿಷ್ಠ ಶೇಕಡಾ 0.2ಕ್ಕಿಂತ ಕಡಿಮೆ ಇಲ್ಲದಂತೆ ಮತ್ತು ಶೇಕಡಾ 1.5 ಕ್ಕಿಂತ ಹೆಚ್ಚಿಗೆ ಇಲ್ಲದಂತೆ ತೆರಿಗೆಯನ್ನು ವಿಧಿಸಲಾಗುತ್ತದೆ.<br>ಖಾಲಿ ನಿವೇಶನಕ್ಕೆ ಭೂಮಿಯ ಮೂಲ ಬೆಲೆಯ ಮೇಲೆ ಒಂದೇ ರೀತಿಯಾಗಿ ತೆರಿಗೆ ವಿಧಿಸಲು ಕನಿಷ್ಟ ಶೇಕಡಾ 0.2 ಗಿಂತ ಕಡಿಮೆ ಇಲ್ಲದಂತೆ ಮತ್ತು ಗರಿಷ್ಟ ಶೇಕಡಾ 0.5ಕ್ಕಿಂತ ಹೆಚ್ಚಿಗೆ ಇಲ್ಲದಂತೆ ನಿಗಧಿಪಡಿಸಿದೆ.<br>ಕಟ್ಟಡಕ್ಕೆ ಹೊಂದಿಕೊಂಡಿರುವ 1000 ಚದರ ಅಡಿಗಳಿಗಿಂತ ಹೆಚ್ಚಿನ ಅಳತೆಯ ಖಾಲಿ ನಿವೇಶನಕ್ಕೆ ತೆರಿಗೆಯನ್ನು ವಿಧಿಸಲಾಗುತ್ತಿದೆ.<br>ಕರ್ನಾಟಕ ಪುರಸಭೆಗಳ ಅಧಿನಿಯಮ 1964ರ ಕಲಂ 101(2)(ಎ) ರನ್ವಯ ವಾಣಿಜ್ಯ ಕಟ್ಟಡಗಳಿಗೆ ಕನಿಷ್ಟ ಶೇಕಡಾ 0.5 ರಿಂದ ಗರಿಷ್ಟ ಶೇಕಡಾ 3ರ ಮಿತಿಯಲ್ಲಿ ತೆರಿಗೆಗೆ ಗುರಿಪಡಿಸಿ ಸದರಿ ವಾಣಿಜ್ಯ ಕಟ್ಟಡದ ಮೂಲ ಬೆಲೆಯ ಮೇಲೆ ಆಸ್ತಿ ತೆರಿಗೆ ದರವನ್ನು ನಿಗಧಿಪಡಿಸಲಾಗುತ್ತದೆ.<br>ಮಾರುಕಟ್ಟೆ ಮಾರ್ಗಸೂಚಿ ಬೆಲೆಯನ್ನು ಪರಿಷ್ಕರಣೆ ಮಾಡದಿರುವ ವರ್ಷದಲ್ಲಿ ಕನಿಷ್ಠ ಶೇಕಡಾ 3 ಕ್ಕಿಂತ ಕಡಿಮೆ ಇಲ್ಲದಂತೆ ಮತ್ತು ಗರಿಷ್ಟ ಶೇಕಡಾ 5ಕ್ಕಿಂತ ಹೆಚ್ಚಿಗೆ ಇಲ್ಲದಂತೆ ಹೆಚ್ಚಳ ಮಾಡಲಾಗುತ್ತದೆ. |

| | | |
|---|---|---|
| ಆ) | ಸದರಿ ಪುರಸಭೆ ವ್ಯಾಪ್ತಿಯಲ್ಲಿನ ಆಸ್ತಿಗಳಿಗೆ ಎಕರೆಗೆ ಮತ್ತು ಚದರ ಮೀಟರ್ ಅಳತೆಗೆ ಪ್ರಸ್ತುತ ವಿಧಿಸುತ್ತಿರುವ ಆಸ್ತಿ ತೆರಿಗೆ ಎಷ್ಟು; | ನಗರ ಸ್ಥಳೀಯ ಸಂಸ್ಥೆಗಳಲ್ಲಿ ಎಕರೆ ಅಥವಾ ಚದರ ಮೀಟರ್‌ಗೆ ಇಂತಿಷ್ಟು ತೆರಿಗೆ ಎಂದು ನಿಗಧಿಪಡಿಸುವುದಿಲ್ಲ. ಸ್ವತ್ತಿನ ಮೌಲ್ಯವನ್ನು ಪರಿಗಣಿಸಿ (Capital Value System) ಸ್ವತ್ತಿನ ಮೌಲ್ಯಕ್ಕೆ ತೆರಿಗೆ ದರವನ್ನು ನಿಗಧಿಪಡಿಸಲಾಗುವುದು.<br>ಚಿಕ್ಕಬಾಣವರ ಪುರಸಭೆ ವ್ಯಾಪ್ತಿಯಲ್ಲಿನ ನಿವೇಶನಗಳಿಗೆ ವಿಧಿಸುತ್ತಿರುವ ತೆರಿಗೆಯದರಗಳ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ. |
| ಇ) | ಕಂದಾಯ ಭೂಮಿಯು ಗುಂಟೆ ಲೆಕ್ಕದಲ್ಲಿದ್ದಲ್ಲಿ ಎಕರೆಗೆ ನಿಗಧಿಪಡಿಸಿರುವ ಮೌಲ್ಯದಷ್ಟೇ ಆಸ್ತಿ ತೆರಿಗೆ ವಿಧಿಸಲಾಗುವುದೇ; ಅಥವಾ ಚದರ ಮೀಟರ್ ಅಳತೆಗೆ ನಿಗಧಿಪಡಿಸಿರುವ ಮೌಲ್ಯದಷ್ಟೇ ಆಸ್ತಿ ತೆರಿಗೆಯನ್ನು ವಿಧಿಸಲಾಗುವುದೇ? (ವಿವರಿಸುವುದು) | |

ಸಂಖ್ಯೆ: ನಅಇ 201 ಜಿಇಎಲ್ 2021(ಇ)

ಎನ್. ನಾಗರಾಜು (ಎಂ.ಟಿ.ಬಿ)
ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ
ಸಾರ್ವಜನಿಕ ವಲಯ ಉದ್ಯಮಗಳ ಸಚಿವರು

# ಅನುಬಂಧ

| ಕ್ರ. ಸಂ. | ಪ್ರದೇಶದ ಹೆಸರು | 2021-22 ನೇ ಸಾಲಿನ ಉಪನೋಂದಣಾಧಿಕಾರಿಗಳ ಮಾರ್ಗಸೂಚಿಯಂತೆ ಕಟ್ಟಡ ಮತ್ತು ಖಾಲಿ ಜಾಗಗಳಿಗೆ ನಿಗಧಿಪಡಿಸುತ್ತಿರುವ ತೆರಿಗೆ | | | | |
|---|---|---|---|---|---|---|
| | | ವಾಸೋಪಯೋಗಿ | | ವಾಣಿಜ್ಯ | ಕೈಗಾರಿಕೆ | ಅಪಾರ್ಟ್‌ಮೆಂಟ್ |
| | | 1 ಚದರ ಅಡಿಗೆ | | | | |
| | | ಮನೆ | ಖಾಲಿ ಜಾಗ | | | |
| 1 | ಕೆರೆಗುತ್ತದಹಳ್ಳಿ | 0.295% | 0.2% | 0.47% | 0.47% | – |
| 2 | ಲೇಕ್ ಫ್ಲ್ಯೂಗಾರ್ಡ್‌ನ್ ಸರ್ವೆ 29/1,29/5,29/2 | 0.295% | 0.2% | 0.3% | – | – |
| 3 | ಎಸ್.ಮುನಿರಾಜು ಬಡಾವಣೆ, ಶ್ರೀ ವಿನಾಯಕ ನಗರ 1ನೇ ಫೇಸ್, ಶ್ರೀ ವಿನಾಯಕ ನಗರ 2ನೇ ಫೇಸ್ | 0.295% | 0.2% | 0.3% | 0.3% | – |
| 4 | ಕೆರೆಗುಡ್ಡದಹಳ್ಳಿ-ಚಿಕ್ಕಬಾಣಾವರ-ಅಬ್ಬಿಗೆರೆ ಮೈನ್‌ರೋಡ್, ವಿಯಾ ಅಬ್ಬಿಗೆರೆ ಗ್ರಾಮ, ಗ್ಯಾಸ್ ಪೈಪ್ ಲೈನ್‌ರಸ್ತೆ, ಕೆರೆಗುಡ್ಡದಹಳ್ಳಿ & ದಾಸಪ್ಪನಪಾಳ್ಯ | 0.21% | 0.2% | 0.25% | 0.25% | – |
| 5 | ಗಾಣಿಗರಹಳ್ಳಿ | 0.44% | 0.3% | 0.7% | 0.7% | – |
| 6 | ಚಿಕ್ಕಬಾಣಾವರ | 0.25 | 0.31 | 0.81 | 0.81 | |
| 7 | ಸರ್ವೆ ನಂ.81/ಎ, 86, 87, 88, 118/1, 118/2, 118/1ಎ, 118/2ಎ, 118/2ಬಿ, 119, 120/1, 120/2, 120/2, 121, 123/4, 124, 134, 135/1, 135/2, 136/1, 136/2, 137, 138/1, 139/1, 141 ಗಳಲ್ಲಿ ಚಿಕ್ಕಬಾಣಾವರ ಪೆರಿಪೆರಲ್‌ರಿಂಗ್‌ರಸ್ತೆಗೆ ಹೊಂದಿಕೊಂಡಿರುವ ಸ್ವತ್ತುಗಳಿಗೆ ಸರ್ವೆ ನಂ.81ಇ 86,87,88,118,119,120,121,122, 123,136, 137,141,146,139,138,134,135,125,126,124 ಗಳಲ್ಲಿ ಚಿಕ್ಕಬಾಣಾವರ ಹೆಸರಘಟ್ಟ ರಸ್ತೆಗೆ ಹೊಂದಿಕೊಂಡಿರುವ ಸ್ವತ್ತುಗಳಿಗೆ. | 0.25 | 0.31 | 0.81 | 0.81 | |
| 8 | ಕೃಷ್ಣ ಕಾಲೇಜ್ ಮುಖ್ಯರಸ್ತೆ | 0.2% | 0.2% | 0.42% | 0.42% | – |
| 9 | ಸೋಮಶೆಟ್ಟಿಹಳ್ಳಿ | 0.25% | 0.2% | 0.41% | 0.41% | – |
| 10 | ಡಿ.ಎಸ್.ಮ್ಯಾಕ್ಸ್ ಸ್ಮಾರ್ಟ್‌ನೆಸ್ಟ್‌ಅಪಾರ್ಟ್‌ಮೆಂಟ್ (ಸರ್ವೆ ನಂ.4/2, ಖಾತಾ ನಂ.103/4/2 & ಎಸ್+ಜಿ+4 ಯುಎಫ್ ) ReraNo. PRM/KA/RERA/1251/309//ಖ/180516/001703 | – | – | – | – | 0.35% |
| 11 | ಜನಪ್ರಿಯಾಗ್ರೀನ್‌ವುಡ್‌ಅಪಾರ್ಟ್‌ಮೇಂಟ್ಸ್, ಸೋಮಶೆಟ್ಟಿಹಳ್ಳಿ | – | – | – | – | 0.25% |
| 12 | ಇಂದ್ರಧನುಷ್, ಸರ್ವೆ ನಂ.7, ಡಿ.ಎಸ್.ಮ್ಯಾಕ್ಸ್, ಸರ್ವೆ ನಂ.28/6 , ಎನ್.ಎನ್.ಹೋಮ್ಸ್ | – | – | – | – | 0.3% |
| 13 | ವಿ.ಎನ್.ಎನ್ ಹೋಮ್ಸ್, ರೂಬಿ ಎನ್‌ಕ್ಲೇವ್ (ಸರ್ವೆ ನಂ.28/6, ಖಾತಾ ನಂ.1104/28/6) | – | – | – | – | 0.3% |
| 14 | ನೀರಜ್‌ಅಪಾರ್ಟ್‌ಮೇಂಟ್ಸ್ (ಸರ್ವೆ ನಂ.9/2, ನಿವೇಶನ ಸಂಖ್ಯೆ: 16,17,18,1920,21 ಖಾತಾ ನಂ.308 | – | – | – | – | 0.2% |
| 15 | ಗ್ಲೋಬಲ್ ನಂದನಂ (ಸರ್ವೆ ನಂ.6) | – | 0.2% | – | – | 0.28% |

Ramy
Project Director
District Urban Development Cel
Bangalore Urban District